4) ವಿಷಯ :– ಹಾಸನ ಜಿಲ್ಲೆಯಲ್ಲಿ ಅಕ್ಕಿಯ ಸಾಗಾಣಿಕೆಯ ಬಗ್ಗೆ.

ಶ್ರೀ ಬಿ. ಶಿವರಾಮು (ಗಂಡಸಿ) :– ಹಾಸನ ಜಿಲ್ಲೆಯಲ್ಲಿ ಅಕ್ರಮ ಅಕ್ಕಿಯ ಸಾಗಾಣಿಕೆಯ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :–

ದಿನಾಂಕ : 22–03–2007 ರಂದು ಸಂಜೆ 4–00 ಸಮಯದಲ್ಲಿ ಚನ್ನರಾಯಪಟ್ಟಣದಿಂದ ಮೈಸೂರು ಕಡೆಗೆ ತೆರಳುವ ಮಾರ್ಗದಲ್ಲಿ ಲಾರಿಗಳಲ್ಲಿ ಅಕ್ರಮವಾಗಿ ಗೋಧಿಯನ್ನು ಸಾಗಾಣಿಕೆ ಮಾಡುತ್ತಿರುವುದಾಗಿ ದೊರೆತ ಖಚಿತ ವರ್ತಮಾನ ಆಧರಿಸಿ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ಉಪ ನಿರೀಕ್ಷಕರು ಹೆಮ್ಮನಹಳ್ಳಿ ಗೇಟ್ ಬಳಿ 2 ಲಾರಿಗಳನ್ನು ತಡೆದು ಪರಿಶೀಲಿಸಿರುತ್ತಾರೆ. ಪರಿಶೀಲನೆಯಲ್ಲಿ ಲಾರಿ ಸಂಖ್ಯೆ : ಕೆಎ 11–4568 ಹಾಗೂ ಕೆಎ 01 7767 ಈ 2 ಲಾರಿಗಳಲ್ಲಿ ಒಟ್ಟು 480 ಮೂಟೆ ಗೋಧಿಯನ್ನು (ಪ್ರತಿ ಮೂಟೆ 50 ಕೆ.ಜಿ. ತೂಕವುಳ್ಳದ್ದು) ಸಾಗಾಣಿಕೆ ಮಾಡುತ್ತಿದ್ದು ಕಂಡು ಬಂದು ಹಿನ್ನೆಲೆಯಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ವಾಹನ ಚಾಲಕರು ಹಾಜರು ಪಡಿಸದ ಕಾರಣ ಸದರಿ ಪ್ರಮಾಣದ ಗೋಧಿ ಚೀಲಗಳನ್ನು ಮತ್ತು ಲಾರಿಗಳನ್ನು ಸರ್ಕಾರಕ್ಕೆ ಜಪ್ತಿ ಪಡಿಸಿಕೊಂಡಿರುತ್ತಾರೆ. ಹಾಗೂ ಚಾಲಕರನ್ನು ಬಂಧಿಸಿ ಪ್ರಥಮ ತನಿಖಾ ವರದಿಯನ್ನು ತಯಾರಿಸಿ ಕೆ.ಆರ್.ಪೇಟೆ, ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ನ್ಯಾಯಾಲಯದಲ್ಲಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವಶಪಡಿಸಿಕೊಂಡಿರುವ 480 ಚೀಲ ಗೋಧಿಯಲ್ಲಿ ಮಾದರಿ ಸಂಗ್ರಹಣೆಗಾಗಿ 4 ಮೂಟೆ ಗೋಧಿಯನ್ನು ಪ್ರಕರಣದ ಸಂಬಂಧ ಅವರ ವಶದಲ್ಲಿಟ್ಟುಕೊಂಡು ಉಳಿಕೆ 476 ಮೂಟೆ ಗೋಧಿಯನ್ನು ಜಿಲ್ಲಾಧಿಕಾರಿಗಳು ಮಂಡ್ಯ ರವರ ವಶಕ್ಕೆ ಪಡೆದುಕೊಳ್ಳುವಂತೆ ಕೋರಿರುತ್ತಾರೆ.

ಮಂಡ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ : ಎಸ್2/ಇಸಿ/ಸಿಆರ್/75/2006–07, ದಿನಾಂಕ : 30–03–2007 ರಂತೆ ದಿನಾಂಕ : 22–03–2007 ರಂದು ಕೆ.ಆರ್. ಪೇಟೆ ಹೆಮ್ಮನಹಳ್ಳಿ ಗೇಟ್ ಬಳಿ ಅಕ್ರಮ ಸಾಗಾಣಿಕೆ ಮೇರೆಗೆ ವಶಪಡಿಸಿಕೊಂಡಿರುವ 480 ಚೀಲ ಗೋಧಿಯ ಪೈಕಿ ಅವರ ಸುಪರ್ದಿಯಲ್ಲಿಟ್ಟುಕೊಂಡಿರುವ 4 ಚೀಲ ಗೋಧಿ ಕಳೆದು ಉಳಿಕೆ 476 ಚೀಲ ಗೋಧಿಯನ್ನು ಅಗತ್ಯ ವಸ್ತುಗಳ ಕಾಯ್ದೆ 1955ರ ಸೆಕ್ಷನ್ 6ಎ 2(2)ರ ಅನ್ವಯ ಕೆ.ಆರ್.ಪೇಟೆ ಗ್ರಾಮಾಂತರ ಆರಕ್ಷಕ ಠಾಣೆ ಉಪ ಆರಕ್ಷಕರು, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಮಂಡ್ಯರವರ

ವಶಕ್ಕೆ ನೀಡುವಂತೆ ಹಾಗೂ ಜಿಲ್ಲಾ ವ್ಯವಸ್ಥಾಪಕರು, ಕೆ.ಎಫ್.ಸಿ.ಎಸ್.ಸಿ., ಮಂಡ್ಯರವರು ಮುಂದಿನ ಆದೇಶದ ತನಕ ಸದರಿ ಪ್ರಮಾಣದ ಗೋಧಿಯನ್ನು ಮಂಡ್ಯ ಕೆ.ಎಫ್.ಸಿ.ಎಸ್.ಸಿ. ಗೋದಾಮಿನಲ್ಲಿ ಸುಸ್ಥಿತಿಯಲ್ಲಿ ದಾಸ್ತಾನಿಡಲು ಆದೇಶಿಸಿರುತ್ತಾರೆ. ನಂತರ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ : ಎಸ್2/ಇಸಿ/ಸಿಆರ್/75/2006-07 ದಿ: 2-04-2007 ರಂತೆ ಸದರಿ ದಾಸ್ತಾನನ್ನು ಸಾರ್ವಜನಿಕ ಪಡಿತರ ವ್ಯವಸ್ಥೆ ಮುಖಾಂತರ ಮಾರಾಟ ಮಾಡಿ ಬಂದ ಹಣವನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಲು ಆದೇಶಿಸಿರುತ್ತಾರೆ.

ದಿನಾಂಕ : 29-03-2007 ರಂದು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಹಾಸನ ಜಿಲ್ಲೆ ರವರು ವರದಿ ಮಾಡಿರುವಂತೆ ಹಾಸನ ನಗರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿರುವ ಶ್ರೀ ರಾಜಶೇಖರ್ ಬಿನ್ ಶಿವಣ್ಣ ಎಂಬುವರ ಗೋದಾಮಿನಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ ಸುಮಾರು 50 ಕಿಲೋ ತೂಕದ 92 ಚೀಲ ಅಕ್ಕಿ ಮತ್ತು 60 ಕಿಲೋ ತೂಕದ 524 ಚೀಲ ಅಕ್ಕಿಯನ್ನು ಭಾರತ ಆಹಾರ ನಿಗಮದ ಲೇಬಲ್ ಇದ್ದುದರಿಂದ ಅಕ್ರಮ ದಾಸ್ತಾನು ಎಂದು ಪರಿಗಣಿಸಿ ಜಿಲ್ಲಾಧಿಕಾರಿಗಳು ವಶಪಡಿಸಿಕೊಂಡಿದ್ದು ಪ್ರಕರಣ ದಾಖಲಿಸಲಾಗಿದೆ.

ದಿನಾಂಕ : 01-04-2007 ರಂದು ಹಾಸನ ನಗರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿರುವ ಶ್ರೀ ಓಂಕಾರ್ ಟ್ರೇಡರ್ಸ್ ಮಾಲೀಕರಾದ ರಾಜಶೇಖರ್ ಇವರು ತಮ್ಮ ಖಾಸಗಿ ಗೋದಾಮಿನಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ 50 ಕಿಲೋ ತೂಕದ 450 ಚೀಲ ಗೋಧಿ 50 ಕಿಲೋ ತೂಕದ 2 ಚೀಲ ಅಕ್ಕಿ ಹಾಗೂ 100 ಕಿಲೋ ತೂಕದ 21 ಚೀಲ ಸಕ್ಕರೆಯನ್ನು ವಶಪಡಿಸಿಕೊಂಡು ಹಾಸನ ಜಿಲ್ಲೆಯ ಉಪ ನಿರ್ದೇಶಕರು ಪ್ರಕರಣವನ್ನು ದಾಖಲಿಸಿರುತ್ತಾರೆ ಹಾಗೂ ಹೆಚ್ಚಿನ ತನಿಖೆಗಾಗಿ ಆರಕ್ಷಕ ನಿರೀಕ್ಷಕರಿಗೆ ಪ್ರಕರಣವನ್ನು ವರದಿ ಮಾಡಿರುತ್ತಾರೆ.

ಶ್ರೀ ಬಿ. ಶಿವರಾಮು :- ಮಾನ್ಯ ಛೇರ್ಮನ್‌ರೆ, ಬಹುಶಃ ತಮ್ಮ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿರುವ ಪ್ರಕಾರ ನಿರಂತರವಾಗಿ 22ನೇ ತಾರೀಖಿನಿಂದ ಪ್ರಾರಂಭವಾಗಿದ್ದು, 29, 01 ಮತ್ತು 04 ಈ ಮೂರು ಅವಧಿಯಲ್ಲಿ ಅಕ್ಕಿ, ಸಕ್ಕರೆ, ಗೋಧಿ, ಹಾಸನದಲ್ಲಿ ಎಲ್ಲಾ ಕಡೆಗೂ ದೊರೆಯುತ್ತಿದೆ. ಮಾನ್ಯ ಮಾಧುಸ್ವಾಮಿಯವರೆ, ರಾಜ್ಯ ಸುಭಿಕ್ಷೆವಾಗಿದೆಯೋ ಅಥವಾ ಜಿಲ್ಲೆ ಸುಭಿಕ್ಷೆವಾಗಿದೆಯೋ ಗೊತ್ತಿಲ್ಲ. ಕಾಳಸಂತೆಯಲ್ಲಿ ಈ ರೀತಿಯಾಗಿ ನಿರಂತರವಾಗಿ ದಾಸ್ತಾನು ಸಿಗುತ್ತದೆ ಎನ್ನುವ ಬಗ್ಗೆ ನಿಮ್ಮ ಮಾಹಿತಿಗೆ ಬಂದು ದಾಖಲೆ ಸೃಷ್ಟಿಯಾಗಿದೆ. ಇದು ಅಲ್ಲದೇ ಇನ್ನು ತಪ್ಪಿಸಿಕೊಂಡು ಮಾರಾಟ ಆ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರಬಹುದು. ಯಾವ ಒಂದ ಜಾಲ ಇದರಲ್ಲಿ ತೊಡಗಿಸಿಕೊಂಡಿರಬಹುದು.

ಇವತ್ತು ಜನಸಾಮಾನ್ಯರಿಗೆ ಬಡವರಿಗೆ ಕೊಡತಕ್ಕಂಥ ಒಂದು ಅಕ್ಕಿ ದಾಸ್ತಾನು ಈ ರೀತಿಯಾಗಿ ಕಾಳಸಂತೆಯಲ್ಲಿ ನಿರಂತರವಾಗಿ ಮಾರಾಟ ಆಗುತ್ತಿದೆ, ದೊರೆಯುತ್ತಿದೆ ಎನ್ನತಕ್ಕಂಥ ಮಾಹಿತಿ ನಿಮಗೆ ದೊರೆತಾಗ, ಮುಂದೆ ನಾವು ಏನು ಕ್ರಮ ತೆಗೆದುಕೊಳ್ಳಬಹುದು. ಇವತ್ತು ಸಾಕಷ್ಟು ಇಲಾಖೆಗಳ ಮೂಲಕ ದಾಸ್ತಾನು ಬರುತ್ತಿದೆ. ಪಡಿತರ ವಿತರಣೆಯಿಂದ ಇರಬಹುದು, ನಮ್ಮ natural calamity ಯಲ್ಲಿ ಬರುತ್ತಿರುವ ದಾಸ್ತಾನು ಇರಬಹುದು, ಜಲಾನಯನ ಅಭಿವೃದ್ಧಿ ಯೋಜನೆಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಿರಬಹುದು. ಈ ರೀತಿಯಾಗಿ ಬರುತ್ತಿರುವ ದಾಸ್ತಾನು ಕಾಳಸಂತೆಯಲ್ಲಿ ಮಾರಾಟವಾಗುವುದಾದರೆ, ಇದರಿಂದ ಜನಸಾಮಾನ್ಯರಿಗೆ ಏನು ಪ್ರಯೋಜನವಾಯಿತು. ಯಾವ ಉದ್ದೇಶಕ್ಕಾಗಿ ಇದನ್ನು ಸರ್ಕಾರ ಜಿಲ್ಲೆಗೆ ಒದಗಿಸುತ್ತಿದೆಯೋ, ಅದರ ಸದುಪಯೋಗವಾಗಬೇಕು ಎನ್ನುವುದು ನಮ್ಮೆಲ್ಲರ ಉದ್ದೇಶ. ಇವತ್ತು ಆಗುತ್ತಿಲ್ಲವೆನ್ನುವ ಬಗ್ಗೆ ನಿಮಗೆ ಮನವರಿಕೆಯಾದ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ? ನನಗೆ ಅನಿಸತಕ್ಕಂಥದ್ದು, ಈಗ ನೀವು ಹೇಳಿದಿರಿ, ನಮಗೆ ದೊರೆತಿರತಕ್ಕಂಥದ್ದು, ಇಷ್ಟು ಕ್ರಮ ತೆಗೆದುಕೊಂಡಿದ್ದೇವೆಂದು, ನಮ್ಮದು ಅದರಲ್ಲಿ ಆಕ್ಷೇಪಣೆ ಇಲ್ಲ. ಆದರೆ ಇದು ಜಿಲ್ಲೆಯಿಂದ ಜಿಲ್ಲೆಗೆ ಹೋಗುತ್ತಿದೆ. ಜಿಲ್ಲೆಯಲ್ಲಿರುವ ಜನಸಾಮಾನ್ಯರಿಗೆ ಸರಿಯಾಗಿ ದೊರೆಯುತ್ತಿಲ್ಲ. ವ್ಯಾಪಾರಗಾರರು ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಒಂದು ನಿದರ್ಶನ ನಮ್ಮ ಮುಂದೆ ಇದೆ. 2004–05 ರಲ್ಲಿ ಇದೇ ರೀತಿ ಕಾಳಸಂತೆಯಲ್ಲಿ ಆಹಾರ ಪದಾರ್ಥಗಳು ಮಾರಾಟವಾಗತಕ್ಕಂಥ ಜಾಲವನ್ನು ಹಿಡಿಯಬೇಕೆನ್ನುವ ದೃಷ್ಟಿಯಿಂದ C.O.D. ಗೆ ತಾವು enquiry ಗೆ ಕೊಟ್ಟಿದ್ದೀರಿ. ನಾನು ಒಂದೇ ಒಂದು ಪ್ರಕರಣವಾಗಿದ್ದರೆ ಇವತ್ತು ಹೇಳುತ್ತಿರಲಿಲ್ಲ. 27ನೇ ತಾರೀಖು ಆಗಿತ್ತು, ತಾವು ಆ ದಿವಸ ಒಂದು ಕೇಸ್‌ನ್ನು ಮಾಡಿದ್ದೀರಿ. ತದನಂತರ ನೀವೇ ಹೇಳಿದಂತೆ, 29 ಮತ್ತು 01 ನೇ ತಾರೀಖಿಗೆ ಆಯಿತು. ಇನ್ನು ಎರಡು ದಿವಸ ಹೋದರೆ, ಇನ್ನು ಎಷ್ಟು ಸಿಗುತ್ತದೆ ಗೊತ್ತಿಲ್ಲ. ನೀವು ಯಾರೂ ರೇಡ್ ಮಾಡಿಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಏನಾದರೊಂದು ಪ್ರಾಮಾಣಿಕವಾದ ಪ್ರಯತ್ನ ಈ ದಿಕ್ಕಿನಲ್ಲಿ ನಡೆದಿದ್ದರೆ ಅದು ಮಾಧ್ಯಮದವರಿಂದ, ಮಾಧ್ಯಮದವರು ಬೆನ್ನತ್ತಿ ಹಿಡಿದು, ಅಧಿಕಾರಿ ವರ್ಗದವರಿಗೋ ಮತ್ತೊಬ್ಬರಿಗೆ ತೋಚಿದ್ದನ್ನು ಬಿಟ್ಟರೆ, ಇದರಲ್ಲಿ ನಿಮ್ಮ ಅಧಿಕಾರಿಗಳು ಆಗಲಿ, ಅಥವಾ ಬೇರೆ ಪೊಲೀಸ್ ಅಧಿಕಾರಿಗಳು ಆಗಲಿ, ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಹಿಡಿದಿರತಕ್ಕಂಥದ್ದು ಅಲ್ಲ. ಇದರ ಅರ್ಥ ನಿರಂತರವಾಗಿ ಜಿಲ್ಲೆಯಲ್ಲಿ ನಡೆಯುತ್ತಿದೆ. ಇದು ಜಿಲ್ಲೆಯಿಂದ ಜಿಲ್ಲೆಗಳಿಗೆ ಹೋಗುತ್ತಿದೆ. ಅದಕ್ಕೋಸ್ಕರವಾಗಿ ಹಿಂದೆ ಒಂದು ಪ್ರಾಮಾಣಿಕವಾದ ಪ್ರಯತ್ನ, ಇದೇ ಉಸ್ತುವಾರಿ ಸಚಿವರ ಒಂದು ನೇತೃತ್ವದಲ್ಲಿ C.O.D. ಗೆ ವಹಿಸುವುದರ ಮೂಲಕ ಏನು ಆಗಿತ್ತೋ, ಅದೇ ರೀತಿಯ ಒಂದು ವ್ಯವಸ್ಥೆಯನ್ನು

ಮತ್ತೊಮ್ಮೆ ತಾವು ಮಾಡಿದರೆ, ಬಹುಶಃ ಈ ಒಂದು ಜಾಲಕ್ಕೆ ಒಂದು ತಡೆಯನ್ನು ಒಡ್ಡಬಹುದು. ಜೊತೆಗೆ ಜನಸಾಮಾನ್ಯರಿಗೆ ಕನಿಷ್ಟ ಈ ದಾಸ್ತಾನು ದೊರೆಯತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಾಮಾಣಿಕವಾದ ವ್ಯವಸ್ಥೆ ಇದೆ. ಇಲ್ಲದಿದ್ದರೆ ಪಡಿತರ ವ್ಯವಸ್ಥೆಯಲ್ಲಿ ಏನಾಗುತ್ತಿದೆ ಎನ್ನುವುದು ತಮಗೆ ಗೊತ್ತು. ಗೋಧಿ ಅಂಗಡಿಗೆ ಹೋಗುತ್ತದೋ ಇಲ್ಲವೋ, ಕಾರ್ಡಿಗೆ ಎಂಟ್ರಿ ಮಾತ್ರ ಬರುತ್ತದೆ. ಬೇರೆ ಕಡೆಗೆ ಎಲ್ಲಿ ಹೋಗುತ್ತದೋ, ಇವತ್ತು ಸಕ್ಕರೆ ಮತ್ತು ಅಕ್ಕಿ ಸಿಗುವಂಥ ವ್ಯವಸ್ಥೆಯಾಗಿದೆ. ಪೇಪರ್‌ನಲ್ಲಿ ಕೆಲವೊಂದು ಆರ್ಟಿಕಲ್‌ಗಳು ಬಂದಿವೆ. ಸಾಕಷ್ಟು ಪ್ರಮಾಣದಲ್ಲಿ ನೋಡುವುದಾದರೆ, ದಿನನಿತ್ಯ ಎಲೆಕ್ಟ್ರಾನಿಕ್ ಮಿಡಿಯಾದಿಂದ ಹಿಡಿದು ಎಷ್ಟು ರೀತಿ, ಯಾವ ರೀತಿ, ಎಷ್ಟೆಷ್ಟು ಅಕ್ಕಿ, F.C.I. ಗೋಡೌನ್‌ಗಳ ಸೀಲು ಸಮೇತ, ಇಷ್ಟೊಂದು ವ್ಯವಸ್ಥಿತವಾಗಿ ಒಂದು ಜಾಲ ನಡೆಯುತ್ತಿದೆ ಎಂದರೆ, ಜಿಲ್ಲಾಧಿಕಾರಿಗಳ ಕಚೇರಿಗೆ, ಜಿಲ್ಲೆಯಲ್ಲಿರುವ ಜನಸಾಮಾನ್ಯರು ಬೀಗ ಹಾಕುವಂಥ ವ್ಯವಸ್ಥೆ ಸೃಷ್ಟಿಯಾಗುತ್ತಿದೆ, ಬಹುಶಃ ನಾನು ಅಷ್ಟೇ ಹೇಳುತ್ತಿದ್ದೇನೆಂದು ಅಲ್ಲ, ಮಾನ್ಯ A.T. ರಾಮಸ್ವಾಮಿಯವರೆ, 4 ದಿವಸಗಳ ಹಿಂದೆ, ಆಯವ್ಯಯವದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ರೀತಿಯ ಒಂದು ವ್ಯವಸ್ಥೆ ಜಿಲ್ಲೆಯಲ್ಲಿ ನಡೆಯುತ್ತಿದೆ. ಇದಕ್ಕೆ ಕಡಿವಾಣವನ್ನು ಹಾಕುವಂಥ ಕೆಲಸ ಆಗಬೇಕು ಎನ್ನುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಕೂಡ ಮಾಡಿದ್ದಾರೆ. ಅದರ ಅರ್ಥ ಇಲ್ಲಿ ಯಾವುದೇ ಬೇಧ ಭಾವ ಇಲ್ಲದೇ, ಜನಸಾಮಾನ್ಯರಿಗೆ ದೊರೆಯಬೇಕಾದಂಥ ಆಹಾರ ಪದಾರ್ಥಗಳು ದೊರೆಯಬೇಕು ಎನ್ನುವ ಒಂದು ಸದುದ್ದೇಶದಿಂದ ಏನು ನಾನು ತಮ್ಮ ಮುಂದೆ ಚರ್ಚೆಯನ್ನು ಮಾಡುತ್ತಿದ್ದೇನೆ. ಆ ಹಿನ್ನೆಲೆಯಲ್ಲಿ ಹಿಂದೆ ಆದಂಥ ಒಂದು ರೀತಿಯಲ್ಲಿ C.O.D. ಗೆ ವಹಿಸುವ ಆದೇಶವನ್ನು ಮಾಡಿದರೆ, ಬಹುಶಃ ಪ್ರಾಮಾಣಿಕವಾಗಿ ಅಲ್ಲಿಯ ಜನರಿಗೆ ಇದರ ಸೌಲಭ್ಯ ದೊರೆಯುತ್ತದೆ ಎನ್ನತಕ್ಕಂಥದ್ದು ನನ್ನ ಒತ್ತಾಯ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :– ಮಾನ್ಯ ಛೇರ್ಮನ್‌ರೆ, ಮಾನ್ಯ ಶಿವರಾಂರವರು ಹಾಸನ ಜಿಲ್ಲೆಯಲ್ಲಿ 22ನೇ ತಾರೀಖು ಕೆ.ಆರ್.ಪೇಟೆಯಲ್ಲಿ ಹಿಡಿದಿದ್ದು, ಯಾವುದೇ ಪತ್ರಿಕೆಯಲ್ಲಿ ಬಂದಿರಲಿಲ್ಲ. ಪೊಲೀಸ್‌ನವರು ದಾಸ್ತಾನು ಹೋಗುವ ಸಂದರ್ಭದಲ್ಲಿ ಹಿಡಿದಿದ್ದಾರೆ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಆದ ಮೇಲೆ, ಹಾಸನದಲ್ಲಿ 29ನೇ ತಾರೀಖು ಹಿಡಿದಿದ್ದಾರೆ. ಏಕೆಂದರೆ ಇದಕ್ಕೆ ರಾಜಕೀಯ ಬೆರೆಸಿದರೆ ನನ್ನದೇನು ಅಭ್ಯಂತರವಿಲ್ಲ. ಬೆರೆಸಲಿ ನಾವು ಏನು ಬೇಡ ಅನ್ನುವುದಿಲ್ಲ. ರಾಜಕೀಯ ಪ್ರಚಾರಕ್ಕಾಗಿ.... ಯಾವ ನಿರ್ಧಾಕ್ಷಿಣ್ಯವಿಲ್ಲದೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಏನಾದರೂ ಇದ್ದರೆ ಅದರ ಬಗ್ಗೆ ನಮಗೆ ಹೇಳಿದರೆ, ನಾವು ಯಾವ ತರಹ ಬೇಕು ಆ ತರಹ ಕೆಲಸವನ್ನು ಮಾಡುತ್ತೇವೆ. ಅವರ ಕಾಲದಲ್ಲಿ ಇತ್ತು,

ನಾನು ಬೇಡವೆಂದು ಹೇಳಿದೆನಾ? ಎರಡು ನಿಮಿಷ, ಅವರು ನಮ್ಮ ಜಿಲ್ಲೆಯ ಬಗ್ಗೆ ಹೇಳಿರುವುದರಿಂದ ನಾನು ಹೇಳಬೇಕಾಗುತ್ತದೆ. ನಾನೊಬ್ಬ ಜಿಲ್ಲಾ ಸಚಿವನಾಗಿ ನಮ್ಮ ವಿಷಯ ಹೇಳಬೇಕಾಗುತ್ತದೆ. ಅವರ ಕ್ಷೇತ್ರದಲ್ಲಿಯೆ ಚುನಾವಣೆಗೆ ಮುಂಚೆ ಮೂರುವರೆ ಸಾವಿರ ಕಾರ್ಡ್‌ನ್ನು ಕೊಡಿಸಿದರು. ನಮ್ಮ ಜೊತೆಯಲ್ಲಿ ಅವರು ಸಚಿವರಾಗಿದ್ದರು. ಅವರ ಕಾಲದಲ್ಲಿಯದ್ದು ತನಿಖೆ ಮಾಡಿಸಿ, 17 ಜನ V.A. ಗಳನ್ನು suspend ಮಾಡಿ ಎಂದು ಬಂತು, ಮತ್ತೆ 8 ದಿವಸ ಬಿಟ್ಟ ನಂತರ suspend ಮಾಡುವುದು ಬೇಡವೆಂದು ಅಂದರು. ನಾನು ಏಕೆ ತಲೆಕೆಡಿಸಿಕೊಳ್ಳುವುದಕ್ಕೆ ಹೋಗಲಿ. ಏನಾಗುತ್ತದೆಂದರೆ, ರಾಜಕೀಯ ಬೆರೆಸುವುದಕ್ಕೆ ಹೋಗಬಾರದು. ನನ್ನದೇನು ಎಂದರೆ, ಯಾರದಾದರೂ ತಪ್ಪಿದ್ದರೆ, ಯಾವ ತರಹ ಬೇಕಾದರೂ ತನಿಖೆ ನಡೆಸಲಿ. ಬಡ ಜನಸಾಮಾನ್ಯರಿಗೆ ಅನ್ಯಾಯವಾಗಬಾರದು.

7–30 ಗಂಟೆ

ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೇನೆ. ಸುಮಾರು 40 ಜನ ಒಂದು ತಿಂಗಳು, ಒಂದೂವರೆ ತಿಂಗಳು ಮಂಗಳೂರು ಜೈಲಿನಲ್ಲಿದ್ದರು. ನಾವು ಬೇಲ್ ಕೊಡದೇ ಸಿಓಡಿ ತನಿಖೆಯನ್ನು ಮಾಡಿಸಿದ್ದೇವೆಲ್ಲ, ಮತ್ತೆ ಏನಾಯಿತು, ಯಾರ್‍ಯಾರು ಒತ್ತಡ ಮಾಡಿದರು, ಏನು ಮಾಡಿದರು, ಅದೆಲ್ಲ ನನಗೆ ಗೊತ್ತಿಲ್ಲ. ಬೇಕಾದರೆ ಇವತ್ತು ಹೇಳುತ್ತೇನೆ, ಯಾವ ರೀತಿ ತನಿಖೆ ಬೇಕಾದರೂ ಮಾಡಿಸಿ. ನಮ್ಮದೇನೂ ಅಭ್ಯಂತರವಿಲ್ಲ. ನಮಗೆ ಎನೆಂದರೆ ಬಡವರಿಗೆ, ಜನಸಾಮಾನ್ಯರಿಗೆ ಸಿಗುವಂಥ ಪದಾರ್ಥ ಸಿಗಬೇಕೆನ್ನುವುದು ಈ ಸರ್ಕಾರದ ಗುರಿ. ಮುಖ್ಯಮಂತ್ರಿಗಳದೂ ಅಷ್ಟೆ. ಉಪ ಮುಖ್ಯಮಂತ್ರಿಗಳದೂ ಅಷ್ಟೆ. ನನ್ನದೂ ಅಷ್ಟೆ. ನಮಗೇನು ಇದರಲ್ಲಿ ಏನೂ ಅವರ ಮೇಲೆ ವೈಯಕ್ತಿಕವಾಗಿ ಆಪಾದನೆ ಮಾಡುವುದು, ಇನ್ನೊಬ್ಬರ ಮೇಲೆ ಏನೂ ಇಲ್ಲ. ಆದರೆ ಸರ್ಕಾರಿ ಕಚೇರಿಗಳಿಗೆ ಬೀಗ ಹಾಕಿ ಮಾಡುತ್ತೇವೆಂದರೆ ರಾಜಕೀಯವಾಗಿ ಯಾರು ಮಾಡುತ್ತಾರೆಂದು ತಾವು photo ಹಿಡಿದುಕೊಂಡಿರಲ್ಲ, ಅದನ್ನು ದಯಮಾಡಿ ಇಡಿ. ತನಿಖೆ ಮಾಡುವುದರಲ್ಲಿ ನಾವೇನಾದರೂ ಹಿಂದೆ ಬಿದ್ದಿದ್ದರೆ ಏನು ಬೇಕಾದರೂ ಮಾಡಲಿ. ಇವತ್ತು ಹೇಳುತ್ತೇನೆ, ಯಾವ ರೀತಿ ತನಿಖೆ ಬೇಕಾದರೂ ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಗೋವಿಂದ ಕಾರಜೋಳ :– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶಿವರಾಂ ಅವರು ಹೇಳುವ ಸಂದರ್ಭದಲ್ಲಿ ಪೊಲೀಸರು ಹಿಡಿದಿಲ್ಲ, ಇಲಾಖೆಯ ಅಧಿಕಾರಿಗಳು ಹಿಡಿದಿಲ್ಲ, ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಪೊಲೀಸರು ಹಿಡಿದಿದ್ದಾರೆ. ಇಲಾಖೆಯ ಅಧಿಕಾರಿಗಳೂ ಹಿಡಿದಿದ್ದಾರೆ. ಲಾರಿ ಸಹಿತ ಜಪ್ತಿ ಮಾಡಿದ್ದಾರೆ. ಆದರೆ

ತಾವೇನು ಕಳಕಳಿಯನ್ನು ವ್ಯಕ್ತಮಾಡಿದ್ದೀರಿ, ಬಡವರಿಗೆ ಸಿಗತಕ್ಕ ಆಹಾರಧಾನ್ಯವನ್ನು ವ್ಯಾಪಾರಸ್ಥರು ಕಾಳಸಂತೆಯಲ್ಲಿ ಮಾರಾಟ ಮಾಡಬಾರದು ಎನ್ನುವುದಕ್ಕೆ ನಾನು ಸಹ ಸಹಮತವನ್ನು ವ್ಯಕ್ತಮಾಡುತ್ತೇನೆ. ಇದು ತನಿಖೆಯ ಹಂತದಲ್ಲಿರುವುದರಿಂದ ಪೋಲೀಸರು ಈಗಾಗಲೇ ತನಿಖೆಯನ್ನು ಕೈಗೊಂಡಿದ್ದಾರೆ. ಅದು ಮುಗಿದ ತಕ್ಷಣ ವರದಿ ಬಂದ ಮೇಲೆ ಮುಂದೆ ಯಾವ ರೀತಿ ತಮಗೆ ಹೆಚ್ಚಿನ ತನಿಖೆ ಮಾಡಿಸಬೇಕೆಂದು ಅಭಿಪ್ರಾಯಪಟ್ಟರೆ ಖಂಡಿತವಾಗಿಯೂ ಮಾಡಿಸುತ್ತೇನೆ.

ಶ್ರೀ ಬಿ. ಶಿವರಾಮು :– ನಾನು ಬಹುಶಃ ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ಮಾತನಾಡಿದೆ ಎಂದು ಭಾವಿಸುತ್ತೇನೆ. ಯಾವುದೇ ರಾಜಕೀಯ ಬೆರೆಸಲಿಲ್ಲ ನಾನು. ಯಾರ ಮೇಲೂ ಆರೋಪ ಮಾಡಲಿಲ್ಲ ನಾನು. ಆದರೆ ಪ್ರಾಮಾಣಿಕವಾಗಿ ಬಂದಿರತಕ್ಕ ವಿಚಾರವನ್ನು ಸದನದ ಮುಂದೆ ಮಂಡಿಸಿದ್ದೇನೆ, ಅಷ್ಟೆ. ಹಿಂದೆ ಮೂರುವರೆ ಸಾವಿರ ಕಾರ್ಡ್ ಕೊಟ್ಟಿದ್ದರು, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. 17 ಜನ Village Accountant ಗಳನ್ನು suspend ಮಾಡಿ ಎಂದು ಹೇಳಿದರೂ ಬೇಡ ಎಂದರು. ಇದಕ್ಕೆ ಸಂಬಂಧವಿಲ್ಲ, ಅದಕ್ಕೆ ನಾನು ಪ್ರಸ್ತಾಪಕ್ಕೆ ಹೋಗಿಲ್ಲ. ಇಡೀ ರಾಜ್ಯದಲ್ಲಿ ಬೇಕಾದಷ್ಟು ಬೋಗಸ್ ಕಾರ್ಡ್ ಇತ್ತು ಎಂದು ಆರೋಪ ಬಂದಿದೆ. ನಾನು ಆ ಪ್ರಸ್ತಾಪಕ್ಕೆ ಹೋಗಿಲ್ಲ. ಯಾರ ಹೆಸರನ್ನು ಪ್ರಸ್ತಾಪ ಮಾಡಿಲ್ಲ. ಯಾರನ್ನು ನಾನು ದೂರಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಶಿವರಾಮು ಅವರು ಬೇರೆ ತರಹ ತಪ್ಪು ಕಲ್ಪನೆ ಮಾಡುತ್ತಾರೆ. ನಾನಲ್ಲ. ಅವರ ಕಾಲದಲ್ಲೂ ಹಿಂದೆ ಧರ್ಮಸಿಂಗ್ ಅವರು ಇದ್ದಾಗಲೇ ತನಿಖೆಯನ್ನು ನಡೆಸಿದರು. ಮುಖ್ಯಮಂತ್ರಿ ಧರ್ಮಸಿಂಗ್ ಅವರು ಇದ್ದಾಗ ತನಿಖೆಯನ್ನು ಮಾಡಿದ್ದು. ನಾನು ಮಾಡಿಸಿದ್ದಲ್ಲ, election ಗಿಂತ ಮುಂಚೆ ಮೂರೂವರೆ ಸಾವಿರ ಕಾರ್ಡ್ ಇದೆ ಎಂದು ಅವರೇ ಹೇಳಿದರು, ಒಂದು ವಾರು election ಗಿಂತ ಮುಂಚೆ 15 ದಿವಸ DC, ಹಾಸನ ಜಿಲ್ಲೆ ಒಳಗೆ ಯಾವ ಯಾವ ಕ್ಷೇತ್ರದಲ್ಲಿ ಕಾರ್ಡ್‌ಗಳನ್ನು ಕೊಟ್ಟರು ಎನ್ನುವುದನ್ನು ಇಡೀ ಜನ ಹೇಳುತ್ತಾರೆ. ತನಿಖೆಯಲ್ಲಿ ಏನು ಹೇಳಿದೆವು 17 ಜನ Village Accountant ಗಳನ್ನು Suspend ಮಾಡಬೇಕೆಂದು ನಾನು ಹೇಳುವುದಕ್ಕೆ ಹೋಗಿಲ್ಲ. Food Minister ಅವತ್ತು ಮಾಡುವುದಕ್ಕೆ ಹೇಳಿದರು. ನಾನು ಇರಲಿಲ್ಲ. ನಾನು ಅದಕ್ಕೆ ಹೇಳಿದೆ, ಯಾವ ತನಿಖೆಯನ್ನಾದರೂ ಮಾಡಿ ಎಂದೆ. ಹಿಂದೆ ಹಾಸನದಲ್ಲಿ ಅಕ್ಕಿ ಹಗರಣವಾಯಿತು. 30 ದಿನ ಜೈಲಿನಲ್ಲಿಟ್ಟಿದ್ದರು. ನಾನು ಯಾರಿಗಾದರೂ ಜಾಮೀನನ್ನು ಕೊಡಿಸುವುದಕ್ಕೆ ಹೇಳಿದ್ದೀನಾ? ಇವತ್ತು ಹೇಳುತ್ತೇನೆ, ಈ ತನಿಖೆ ಯಾರೇ ಮಾಡಿರಲಿ, ಯಾವುದೇ ಅಪಾದನೆ ಮಾಡಿರಲಿ, ಬೇಕಾದರೆ ಯಾವ ರೀತಿ ತನಿಖೆಯನ್ನು

ನಡೆಸಲಿ, ನಮ್ಮದೇನೂ ಅಭ್ಯಂತರವಿಲ್ಲ. ಬೇಕಾದರೆ ಇದನ್ನೂ ಸೇರಿಸಿ ಹಿಂದಿನದನ್ನೂ ಸೇರಿಸಿ ಸಿಬಿಐ ಗೆ ಕಳುಹಿಸುತ್ತೇನೆಂದರೆ ನಾವೇನು ಹೆದರುವುದಕ್ಕೆ ಹೋಗುವುದಿಲ್ಲ. ಅದಕ್ಕೂ ಬೇಕಾದರೆ ರೆಡಿ ಇದ್ದೇನೆ. ಏಕೆಂದರೆ ಸಿಬಿಐ ಸಿಬಿಐ ಅನ್ನುತ್ತಾರಲ್ಲ, ಅದಕ್ಕೆ ಕಳುಹಿಸಿಬಿಡಿ ಎಂದು ಹೇಳಿದೆ.

ಶ್ರೀ ಬಿ. ಶಿವರಾಮು :– ಮಾನ್ಯ ರೇವಣ್ಣನವರು ಉತ್ತರವನ್ನು ಕೊಟ್ಟಿದ್ದಾರೆ. ಬೋಗಸ್ ಕಾರ್ಡ್, ವಿಲೇಜ್ ಅಕೌಂಟೆಂಟ್ ಅವೆಲ್ಲ ಬಿಟ್ಟುಬಿಡೋಣ. ಈಗ ನಾನು ಅದಕ್ಕೆ ಹೋಗುವುದಿಲ್ಲ. ಇಷ್ಟು ನೇರವಾಗಿ ಯಾವ ತನಿಖೆಯನ್ನು ಆದರೂ ಮಾಡಬಹುದು ಎನ್ನುವ ಮಾತನ್ನು ಹೇಳುವಾಗ....

ಶ್ರೀ ಹೆಚ್.ಡಿ. ರೇವಣ್ಣ :– ನಾನೇನು ಬೇಡ ಎನ್ನಲಿಲ್ಲ.

ಶ್ರೀ ಬಿ. ಶಿವರಾಮು :– ನಾನು ಮಾತನಾಡಿದ ಮೇಲೆ ಮಾತನಾಡಿ. ಅಷ್ಟು ಸಹನೆ ಇಲ್ಲವೇ? ನೀವೇ ನೇರವಾಗಿ ಎದ್ದು ಹೇಳಿಬಿಡಿ. ಹಿಂದೆ ನಾನು COD ಗೆ ಕೊಡಿಸಿದ್ದೆ ಧರ್ಮಸಿಂಗ್ ಗೆ ಹೇಳಿ, ಇದನ್ನು COD ಗೆ ಕೊಡಿಸುವುದಕ್ಕೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ನಮ್ಮ ಸರ್ಕಾರದ ಮಂತ್ರಿಗಳು ಇವತ್ತು proper ತನಿಖೆ ನಡೆಯುತ್ತಿದೆ, ತನಿಖೆಯಿಂದ ಬಂದ ಮೇಲೆ ನಾನು ಯಾವ ರೀತಿ ಮಾಡಬೇಕೆನ್ನುವುದನ್ನು ಅವರು ಹೇಳುತ್ತಾರೆ. ಅವರು ಮಂತ್ರಿಗಳಿದ್ದಾರೆ. ಅವರು independent ಆಗಿದ್ದಾರೆ. ಯಾವ ರೀತಿ ಬೇಕೋ ಮಾಡಲಿ. ನಾನು ಹೇಳುವುದು ನಿಮಗೇನಾದರೂ ಅಂಥದ್ದು ಇದ್ದರೆ....

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಹಾಸನದಲ್ಲಿ ನೀವು ಇರುವಾಗ ಅವರೇಗೆ ಮಂತ್ರಿಗಳಾಗುತ್ತಾರೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– COD ಅಲ್ಲ, CBI ಗೆ ಕೊಡಿ ಸ್ವಾಮಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಿ. ಶಿವರಾಮು :– ಸಿಬಿಐ ಗೆ ಕೊಡಬೇಕಾದುದನ್ನೇ ಕೊಡಲಿಲ್ಲ. ಇನ್ನು ಇದನ್ನು ಸಿಬಿಐ ಗೆ ಕೊಡುತ್ತೀರಾ ಎಂದು ಕೇಳುವಷ್ಟು ಮೂರ್ಖನೂ ನಾನಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ತಾವು last time ಹೇಳಿದಿರಿ. ಸಿಬಿಐ ಗಿಂತ ಒಳ್ಳೆಯ ಅಧಿಕಾರಿಗಳು ರಾಜ್ಯದಲ್ಲಿ COD ಯಲ್ಲಿದ್ದಾರೆಂದು ಹೇಳಿ. ನಾನು ಹೇಳಲಿಲ್ಲ. ಹಿಂದಿನ ಸರ್ಕಾರದವರು ಹೇಳಿದರು. ನಾನು ಹೇಳುವುದಕ್ಕೆ ಹೋಗಿಲ್ಲ. ಹಿಂದಿನ ಸರ್ಕಾರದಲ್ಲಿ ಹಿಂದೆ ನಂ.1 ಮುಖ್ಯಮಂತ್ರಿಗಳಿದ್ದಂಥವರು, ನಮ್ಮ ಖರ್ಗೆ ಸಾಹೇಬರು ಏನು ಹೇಳಿದರು, ನಮ್ಮ ರಾಜ್ಯದಲ್ಲಿ ಒಳ್ಳೆಯ ಅತಿ ಉತ್ತಮವಾದ COD Officers ಇದ್ದರು, ಅದಕ್ಕೋಸ್ಕರ ಕೆಲವು ಹಲವಾರು ಪ್ರಕರಣಗಳನ್ನು ನಾನು ಕೊಡಲಿಲ್ಲ. ಇದನ್ನು ಹಿಂದೆ ಖರ್ಗೆ ಸಾಹೇಬರು ಮತ್ತು ಹಿಂದಿನ ಮುಖ್ಯಮಂತ್ರಿಗಳೇ certificate ಅನ್ನು ಕೊಟ್ಟಮೇಲೆ ರಾಜ್ಯದ COD ಅಧಿಕಾರಿಗಳು ಒಳ್ಳೆಯವರು ಎಂದ ಮೇಲೆ ಇವರಿಗೆ ಅಪನಂಬಿಕೆ ಏಕೆ? ಏನು ನಾವು ಬೇಡ ಎಂದು ಹೇಳಿದ್ದೀವಾ? ನೀವು ತಾನೆ ಸಿಬಿಐ ಗೆ ಬೇಡ ಎಂದವರು. ಈಗ ನೋಡಿದರೆ ಸಿಬಿಐ ಬೇಕು ಎನ್ನುತ್ತಾರೆ.

ಶ್ರೀ ಬಿ. ಶಿವರಾಮು :– ಈಗ ನಾನು ಮಾನ್ಯ ಕಾರಜೋಳ್ ಅವರೇ ಉತ್ತರ ಕೊಟ್ಟಿದ್ದರೆ ನನ್ನ ಪ್ರಶ್ನೆ ಬೇರೆ. ಜಿಲ್ಲಾ ಉಸ್ತುವಾರಿ ಸಚಿವರು ಎಂದು ಹೇಳಿ ಪದೇ ಪದೇ ಎದ್ದು ವಿಚಾರವನ್ನು ಹೇಳಿದ ಮೇಲೆ ಪ್ರಮಾಣಿಕವಾಗಿ ಚರ್ಚೆ ಆಗಬೇಕಾಗುತ್ತದೆ. ಅದೇ ಧರ್ಮಸಿಂಗ್ ಮತ್ತು ಖರ್ಗೆಯವರು ಇಲ್ಲಿ ಇದ್ದಿದ್ದಾಗ ಈ ವಿಚಾರ ಪ್ರಸ್ತಾಪ ಮಾಡಿದ್ದರೆ ಆಗ ಎದ್ದು ಕೇಳುತ್ತಿದ್ದೆ, ಏನು ಸ್ವಾಮಿ, ನೀವು ಮಾಡಿದ್ದಿರಾ ಎಂದು. ಅವರು ಇಲ್ಲದೇ ಇರುವಾಗ ಚರ್ಚೆ ಮಾಡುತ್ತಿರುವುದರಿಂದ ಇದಕ್ಕೆ ಜವಾಬ್ದಾರಿ ಹೊಣೆಗಾರರು ಯಾರು ಹಿಂದೆ COD ಗೆ ಕೊಟ್ಟವರು ಎಂದು ಸ್ಪಷ್ಟ ಮಾಡಬೇಕಾಗುತ್ತದೆ. ಅವರು ಇಲ್ಲದೇ ಇರುವಾಗ ಅವರ ಹೆಸರು ಹೇಳತಕ್ಕಂಥದ್ದಲ್ಲ. ಪ್ರಾಮಾಣಿಕವಾಗಿ ಧರ್ಮಸಿಂಗ್ ಅವರು ಹೇಳಿದ್ದಾರೆ COD ಗೆ ಕೊಡಿಸಿದವರು ಜಿಲ್ಲಾ ಉಸ್ತುವಾರಿ ಸಚಿವರು ಎಂದು. ಈಗಲೂ ಧರ್ಮಸಿಂಗ್ ಅವರು ಇದ್ದಾಗ ಹೇಳುತ್ತಿದ್ದೆ. ನಾನು ಆ ಬಗ್ಗೆ ಚರ್ಚೆಗೆ ಹೋಗಿಲ್ಲ. ಅವರ ಹೆಸರನ್ನು ನೀವು ಎಳೆದಿರುವುದರಿಂದ ನಾನು ಈಗ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ :– ಇವತ್ತೂ ಹೇಳುತ್ತಿನಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮು :– ನೀವು ಜಗಳ ಎಂದು ಏಕೆ ಭಾವಿಸುತ್ತೀರಿ ಎಂದರೆ ಚರ್ಚೆ ಮಾಡೋಣ. ನಾನು ಅದಕ್ಕೇ ಹೇಳುವುದು, ಅವತ್ತು ಧರ್ಮಸಿಂಗ್ ಅವರು ಕೊಟ್ಟರೋ, ಯಾರು ಕೊಟ್ಟರೋ ಅದನ್ನು ಸ್ವಾಗತಿಸಿ COD ವಿಚಾರಣೆ ಮಾಡಿದ್ದೀರಿ. ಇಲ್ಲಿ ನೇರವಾಗಿ ಮಾತನಾಡಿ. ಅಲ್ಲಿ ಇಲ್ಲಿ ಅಲ್ಲ. ಅವತ್ತೇನು COD ಗೆ ಕೊಡಿಸಿದಿರಿ, ನಿಮಗೆ ನಿಜವಾಗಿ ಇದರ ಬಗ್ಗೆ ಪ್ರಾಮಾಣಿಕತೆ ಇದ್ದರೆ ಅವತ್ತೇನು ಮಾಡಿದಿರಿ, ಅದೇ

ಕೆಲಸವನ್ನು ಇವತ್ತು COD ಗೆ ಕೊಟ್ಟು ಆ ಜಿಲ್ಲೆಯಲ್ಲಿ ನಿಜವಾಗಿ ಪ್ರಾಮಾಣಿಕವಾಗಿ ಜನಸಾಮಾನ್ಯರಿಗೆ ಆಹಾರಪದಾರ್ಥ ಸಿಗಬೇಕು ಎನ್ನುವುದಕ್ಕೆ ನೇರವಾಗಿ ಘೋಷಣೆ ಮಾಡಿ ಹೇಳಿ. ನೀವು ಏಕೆ ಮಧ್ಯದಲ್ಲಿ ಬಾಯಿ ಹಾಕುತ್ತೀರಿ? ಇಲ್ಲದಿದ್ದರೆ ನಾವು ಬಿಡಬೇಕಾಗಿತ್ತು, ಇಷ್ಟು ಹೊತ್ತಿಗೆ ಒತ್ತಾಯ ಮಾಡಿ ಅದನ್ನು ಮಾಡುತ್ತಿದ್ದರೋ ಇಲ್ಲವೋ ಎನ್ನುವುದನ್ನು ನಾನು ನೋಡುತ್ತಿದ್ದೆ. ಮಧ್ಯದಲ್ಲಿ ಹಸ್ತಕ್ಷೇಪ, ರಾಜಕೀಯ ಮಾತನಾಡತಕ್ಕವರು ನೀವು, ರಾಮಸ್ವಾಮಿಯವರೇ ಬಂದು ಅವರೇ ಹೇಳಲಿ, ರಾಮಸ್ವಾಮಿಯವರೇ ನೀವು ಈ ಸದನದಲ್ಲಿ ಆಯವ್ಯಯ ಮಂಡಿಸತಕ್ಕ ಸಂದರ್ಭದಲ್ಲಿ ಅಕ್ಕಿ ಕಾಳ ಸಂತೆಯಲ್ಲಿ ಹೋಗುತ್ತಿದೆ, ಇಡೀ ರಾಜ್ಯದಲ್ಲಿ ವ್ಯವಸ್ಥೆಯನ್ನು ಸರಿಪಡಿಸಬೇಕೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದಿರಿ ಅಲ್ಲವೇ? ಎರಡನೆಯದು, ನಾನು 2004–05 ರಲ್ಲಿ ಇದೇ ರೀತಿ ಒಂದು ಅವ್ಯವಹಾರ ನಡೆದಾಗ ಕಾಳಸಂತೆಯಲ್ಲಿ ಆಹಾರಪದಾರ್ಥಗಳು ಹೋಗುತ್ತಿದ್ದುದನ್ನು ಪತ್ತೆ ಹಚ್ಚಿದಾಗ COD ಗೆ ಕೊಟ್ಟಿದ್ದು ಹೌದೊ ಅಲ್ಲವೋ? ಈಗ ಪ್ರಾಮಾಣಿಕವಾಗಿ ಒಂದು ವಿಚಾರಣೆ ನಡೆಯಬೇಕೆಂದರೆ ಸುಮ್ಮನೆ ನಮ್ಮ ಮನಸೋ ಇಚ್ಛೆ CBI ಗೆ ಕೊಟ್ಟುಬಿಡಿ, COD ಗೆ ಕೊಟ್ಟುಬಿಡಿ, ಅವರಿಗೆ ಕೊಟ್ಟುಬಿಡಿ ಎನ್ನುವುದರ ಬದಲು ನೇರವಾಗಿ ಹೇಳಲಿ ಇವತ್ತು ಈ ಜಿಲ್ಲೆಯಲ್ಲಿ ಅನ್ಯಾಯವಾಗುತ್ತಿದೆ, ಜನಸಾಮಾನ್ಯರಿಗೆ ಆಹಾರಪದಾರ್ಥಗಳು ಸಿಗಬೇಕು, ಹಿಂದೆ ಕೂಡ ನಾವು COD ಗೆ ಹಾಕಿಸಿದ್ದೆವು, ಆ ಅಧಿಕಾರಿಗಳು ಒಂದೂವರೆ ತಿಂಗಳು ಜೈಲಿನಲ್ಲಿದ್ದರು, ಅದೇ ರೀತಿ ಇವತ್ತೂ ಮಾಡಿಸುತ್ತೇನೆ ಜಿಲ್ಲೆಯ ಹಿತದೃಷ್ಟಿಯಿಂದ ಎನ್ನತಕ್ಕ ಆ dictum ಅನ್ನು ಹೇಳಬೇಕು. ಅದು ಬಿಟ್ಟು ಹಿಂದೆ ಧರ್ಮಸಿಂಗ್ ಹಾಕಿದ್ದರು, ಖರ್ಗೆ ಮಾಡಿದ್ದರು, ಅವರು ಮಾಡಿದ್ದರು, ಅವರಿವರ ಮೇಲೆ ಏಕೆ ಹೇಳಬೇಕು? ಇವತ್ತು ಇಬ್ಬರ ಉದ್ದೇಶವೂ ಒಂದೇ. ಸರ್ಕಾರದ ಉದ್ದೇಶವೂ ಈಗ ಮಾನ್ಯ ಉಪಮುಖ್ಯಮಂತ್ರಿಗಳ ಸೈಕಲ್ ವಿಚಾರ ಬಂದ ಕೂಡಲೇ ಬಹಳ ಪ್ರಾಮಾಣಿಕವಾಗಿ ಹೇಳಿದರು, ನಾವು ಸಂತೋಷಪಟ್ಟೆವು. ಹಾಗೆ ಹೇಳಿದರು. ಇದು ವಿಚಾರಣೆ ಆಗಬೇಕು, ಇದು ಜನರ ಹಿತದೃಷ್ಟಿಯಿಂದ ಎಂದು. ಆ ಧೈರ್ಯ ಇರಬೇಕು ಯಾವುದಾದರೂ ಹೇಳುವ ಹಾಗಿದ್ದರೆ. ಪಾರದರ್ಶಕವಾಗಿ ಹೇಳಿ ಸಿಓಡಿ ಗೆ ಕೊಡಿ ಎಂದು. ಆಗ ನಿಮ್ಮನ್ನು ಮೆಚ್ಚುತ್ತೇವೆ. ಅದು ಬಿಟ್ಟು ರಾಜಕೀಯ ಹಸ್ತಕ್ಷೇಪ ಎನ್ನುವ ಮಾತಿನ ಅವಶ್ಯಕತೆ ಇಲ್ಲ. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳೇ ಈ ಮಧ್ಯದಲ್ಲಿ ತಾವು ಪ್ರವಾಸ ಮಾಡಬೇಕಾಗುತ್ತದೆ,

ಛೇರ್ಮನ್ :– ಮಾನ್ಯ ಶಿವರಾಂ ಅವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಶಿವರಾಮು :– ನಮಗೆ ಯಡಿಯೂರಪ್ಪನವರ ಮೇಲೆ ಒಂದು ವಿಶ್ವಾಸ ಬಂದಿದೆ. ಏಕೆಂದರೆ....

ಶ್ರೀ ವಾಟಾಳ್ ನಾಗರಾಜ್ :– ನೀವು ಮಧ್ಯೆ ಹೋಗಬೇಡಿ. ಈಗ ಹೋಗಿರುವುದೇ ನಿಮಗೆ ಸಾಕಾಗಿದೆ. ಮತ್ತೆ ಹೋಗುವುದಕ್ಕೆ ಹೋಗಬೇಡಿ.

ಚೇರ್ಮನ್ :– ಮಾನ್ಯ ಶಿವರಾಂ ಅವರೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಶಿವರಾಮು :– ಹಾಸನದವರ ರಾಜಕಾರಣದಿಂದ ತಾವು ಇವತ್ತು ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಹಾಸನ ಜಿಲ್ಲೆಯ ಹಿತದೃಷ್ಟಿಯಿಂದ ಅದು ಮುಖ್ಯಮಂತ್ರಿ ಜಿಲ್ಲೆ.

ಚೇರ್ಮನ್ :– ಮಾನ್ಯ ಶಿವರಾಂರವರೇ, ಇದು ಗಮನ ಸೆಳೆಯುವ ಸೂಚನೆ. ಚರ್ಚೆ ಬೇರೆ ಕಡೆಗೆ ಹೋಗುತ್ತಿದೆ. ಬೇರೆಯವರಿಗೂ ಅವಕಾಶವನ್ನು ಕೊಡಬೇಕು.

ಶ್ರೀ ಬಿ. ಶಿವರಾಮು :– ಅವರ ಜಿಲ್ಲೆಯಲ್ಲಿ ಇಂಥ ಅವ್ಯವಹಾರಗಳಾಗುತ್ತಿದೆ ಎನ್ನತಕ್ಕದ್ದು ಜನಸಾಮಾನ್ಯರ ಗಮನಕ್ಕೆ ಹೋಗಬಾರದು. ಆ ರೀತಿಯ ಒಂದು ಅಭಿಪ್ರಾಯವಿದೆ. ಉಪ ಮುಖ್ಯಮಂತ್ರಿಗಳಾದ ನೀವೇ ಇವತ್ತು 'ಇದನ್ನು ಸಿ.ಓ.ಡಿ. ಗೆ ವಹಿಸುವುದಕ್ಕೆ ನಾವು ಬದ್ಧವಾಗಿದ್ದೇವೆ' ಎನ್ನುವ ಮಾತನ್ನು ಹೇಳಲಿ. ಇಲ್ಲವೇ ಜಿಲ್ಲಾ ಉಸ್ತುವಾರಿ ಸಚಿವರು ಆ ಮಾತನ್ನು ಹೇಳಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಂತ್ರಿಗಳು ಕುಳಿತಿದ್ದಾರೆ. ಅವರು Calling Attention ಗೆ ಓದಿ ಉತ್ತರ ಹೇಳಿದ್ದಾರೆ. ಪಾಪ! ನೀವು ಅವರನ್ನು ಮೂಲೆಗುಂಪು ಮಾಡಿ....

(ಗೊಂದಲ)

ಶ್ರೀ ಬಿ. ಶಿವರಾಮು :– ಒಮ್ಮೊಮ್ಮೆ ಸಾರ್ವಜನಿಕ ವಿಚಾರಗಳಲ್ಲಿ ಸಚಿವರುಗಳು ನೇರವಾದ ತೀರ್ಮಾನಗಳನ್ನು ಕೈಗೊಳ್ಳುತ್ತಿಲ್ಲ. ಇದೇ ನಮಗೆ ಬಂದಿರತಕ್ಕಂಥ ಸಮಸ್ಯೆ. ಘೋರ ಅನ್ಯಾಯ. ಈ ಜಿಲ್ಲೆಯಲ್ಲಿ ಬೇರೆ ಯಾವುದೇ ನ್ಯಾಯ ಸಿಗುತ್ತಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಕಾರಜೋಳರವರೆ, ಅವರ clarification ಗೆ ನೀವು ಉತ್ತರ ಹೇಳಬೇಕು. ಅದು ನಿಮ್ಮ ಖಾತೆ.

ಶ್ರೀ ವಾಟಾಳ್ ನಾಗರಾಜ್ :– ಸರ್, ಗಮನ ಸೆಳೆಯುವ ಸೂಚನೆಯಲ್ಲಿ ಯಾರು ಯಾವ ಸಚಿವರ ಗಮನ ಸೆಳೆಯುತ್ತಾರೋ, ಅವರು ಉತ್ತರ ಕೊಡಬೇಕು. ತಾವು ಗಂಭೀರವಾಗಿ ದೇವರು ಕುಳಿತುಕೊಳ್ಳುವಂತೆ ಕುಳಿತುಕೊಳ್ಳಿ. ಇದ್ಯಾಕೆ?

ಶ್ರೀ ಹೆಚ್.ಡಿ. ರೇವಣ್ಣ :– ಜಿಲ್ಲಾ ಉಸ್ತುವಾರಿ ಸಚಿವರ ಹೆಸರು ಹೇಳಿದಾಗ...

(ಗೊಂದಲ)

ಶ್ರೀ ಬಿ. ಶಿವರಾಮು :– ಇದು ನಮ್ಮ ಕಾರಜೋಳರವರ ವಿಚಾರವಾಗಿದೆ. ಅದನ್ನು ಬಿಟ್ಟು ನೀವು ಅವರನ್ನು ಎಳೆದಾದ ಮೇಲೆ ನಾವು ಅವರನ್ನು ಎಳೆದುಕೊಳ್ಳಲೇಬೇಕಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಯಾವ ಗಳಿಗೆಯಲ್ಲಿ ಒಂದಾಗುತ್ತಾರೋ ಗೊತ್ತಿಲ್ಲ. ಯಡಿಯೂರಪ್ಪನವರೇ, ನೀವೇನಾದರೂ ಮಧ್ಯ ಪ್ರವೇಶ ಮಾಡಿದರೆ, ನಿಮ್ಮ ಹಣೆಬರಹವನ್ನು ದೇವರು ನೋಡಿಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಶಿವರಾಮು :– ಮುಂದೆ ಬೇರೆಯವರ ಗತಿ ಏನು ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಈಗ ಅವರು ಏನು ಹೇಳುತ್ತಿದ್ದಾರೆ.... ತನಿಖೆಗೆ ಹಿಂಜರಿಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ನಮ್ಮ ಜೀವನದಲ್ಲಿ ತನಿಖೆಗೆ.....

ಶ್ರೀ ಬಿ. ಶಿವರಾಮು :– ಹಿಂಜರಿಯುತ್ತಿದ್ದೀರಿ. ಇದನ್ನು ಸದನದಲ್ಲಿ ನೇರವಾಗಿ ಉಪ ಮುಖ್ಯಮಂತ್ರಿಗಳ ಎದುರಿನಲ್ಲಿ ಹೇಳುತ್ತಿದ್ದೇನೆ. ನೀವು ಹಿಂಜರಿಯುತ್ತಿದ್ದೀರಿ. ನಿಮಗೆ ಧೈರ್ಯವಿದ್ದರೆ, ಸಿ.ಓ.ಡಿ. ಗೆ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ :– Half an hour discussion ಬೇಕಾದರೆ ಕೊಡಿ. ನಾವು ready ಇದ್ದೇವೆ.

ಚೇರ್ಮನ್ :– ಈ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ವಾಟಾಳ್ ನಾಗರಾಜ್ :– ಕಾರಜೋಳ್‌ರವರು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳಾಗಿದ್ದು, ಅವರನ್ನು ಬಿಟ್ಟರೆ, ಬೇರೆ ಯಾರೂ ಹೇಳುವುದಕ್ಕಾಗುವುದಿಲ್ಲ. ಇದು ಗಮನ ಸೆಳೆಯುವ ಸೂಚನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಶಾಸನಸಭೆಗೆ ಇದು ಅವಮಾನ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು.

ಚೇರ್ಮನ್ :– ಮಾನ್ಯ ಕಾರಜೋಳರವರೆ, ಇಲ್ಲಿ ಚರ್ಚೆಗೆ ಬೇರೆ ಸಮಯದಲ್ಲಿ ಅರ್ಧಗಂಟೆ ಸಮಯ ಕೊಡೋಣ. ದಯವಿಟ್ಟು ಕುಳಿತುಕೊಳ್ಳಿ. ಕಾರಜೋಳರವರೆ, ತಾವು ಉತ್ತರಿಸಿ.

ಶ್ರೀ ಗೋವಿಂದ ಎಂ. ಕಾರಜೋಳ :– ಸನ್ಮಾನ್ಯ ಅಧ್ಯಕ್ಷರೆ, ಈ ಹಾಸನದ ಗೂಳಿಗಳ ಕಾದಾಟದಲ್ಲಿ ಕಸದ ಕರು ಮರೆತಂತೆ ನನ್ನನ್ನು ಇವರೆಲ್ಲರೂ ಮರೆತುಬಿಟ್ಟರು. ನನ್ನನ್ನು ಯಾರೂ ಲೆಕ್ಕಕ್ಕೆ ತಗೆದುಕೊಳ್ಳುವುದಿಲ್ಲ. ನನ್ನನ್ನು ಕೇಳುವವರೂ ಇಲ್ಲ. ಇವತ್ತು ಶಿವರಾಮುರವರಿಗೆ ಆತಂಕವಿದೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತೇನೆಂದರೆ, ಇವ್ತು ಶಿವರಾಮುರವರು ಸಿ.ಓ.ಡಿ ಪೊಲೀಸರ ಮುಖಾಂತರ ತನಿಖೆ ಮಾಡಿಸಬೇಕೆಂದರು. ಸಿ.ಓ.ಡಿ ಪೊಲೀಸರು ಕರ್ನಾಟಕ ರಾಜ್ಯ ಪೊಲೀಸರೇ ಆಗಿದ್ದಾರೆ. ತನಿಖೆ ಮಾಡತಕ್ಕಂಥವರು ಕರ್ನಾಟಕ ರಾಜ್ಯದ ಪೊಲೀಸರೇ. ಈಗ ಯಾರು ಮಾಡಿದರೂ ಅಷ್ಟೇ. ಈಗ ತನಿಖೆ ಬಂದ ಮೇಲೆ, ಒಂದು ವೇಳೆ ಅವರೇನಾದರೂ ಸರಿಯಾಗಿ ತನಿಖೆ ಮಾಡದಿದ್ದರೆ, ಎಫ್ಐಆರ್ ಹಾಕದಿದ್ದರೆ ಅಥವಾ ಚಾರ್ಜ್‌ಶೀಟ್ ಹಾಕದಿದ್ದರೆ ಅಥವಾ ಅವರು ಸರಿಯಾಗಿ ಕ್ರಮ ತೆಗೆದುಕೊಳ್ಳದಿದ್ದರೆ, ಖಂಡಿತವಾಗಿಯೂ ಅವರು ಏನು ಬೇಡುತ್ತಾರೋ, ಅದನ್ನು ತನಿಖೆ ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಬಿ. ಶಿವರಾಮು :– ಇವತ್ತು ನಮ್ಮ ಪೊಲೀಸರ ಮೇಲೆ ವಿಶ್ವಾಸವಿಲ್ಲ. ಅದಕ್ಕೋಸ್ಕರ, ಒತ್ತಾಯ ಮಾಡುತ್ತಿದ್ದೇನೆ.

ಛೆರ್ಮನ್ :– ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಬಿ. ಶಿವರಾಮು :– ಅಧ್ಯಕ್ಷರೇ, ನಾನು ಈಗ ನೇರವಾಗಿ ಹೇಳುತ್ತಿದ್ದೇನೆ. ಜಿಲ್ಲಾಡಳಿತದ ವ್ಯವಸ್ಥೆ ಬಗ್ಗೆ ನನ್ನ ಆರೋಪವಿದೆ. ಜಿಲ್ಲಾಡಳಿತದ ಮೇಲೆ ವಿಶ್ವಾಸವಿಲ್ಲ. ಖಂಡಿತವಾಗಿಯೂ ನಿಷ್ಪಕ್ಷಪಾತವಾದಂತಹ. . . .

(ಗೊಂದಲ)

ಶ್ರೀ ಬಿ.ಶಿವರಾಮು :– ಆಗಲೇಬೇಕೆಂಬುದು ನನ್ನ ಒತ್ತಾಯ. ಮತ್ತೆ ಹೇಳಿ ಈಗ. ಸಿ.ಓ.ಡಿ. . . .

(ಗೊಂದಲ)

ಶ್ರೀ ಬಿ.ಶಿವರಾಮು :– ಹೆದರುವುದಿಲ್ಲವೆಂದು ಹೇಳಿದ ಮೇಲೆ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :– ಈಗ ಕೆ.ಆರ್.ಪೇಟೆ ಪೊಲೀಸರಿಗೂ ನಮ್ಮ ಹಾಸನ ಜಿಲ್ಲೆ ಪೊಲೀಸರಿಗೂ ಏನು ಸಂಬಂಧ?

ಛೇರ್ಮನ್ :– ಇದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲ. ದಯವಿಟ್ಟು ಇಬ್ಬರೂ ಕುಳಿತುಕೊಳ್ಳಿ. ತಮಗೆ ಸಾಕಷ್ಟು ಅವಕಾಶ ನೀಡಲಾಗಿದೆ. ಕುಳಿತುಕೊಳ್ಳಿ